ಕರ್ನಾಟಕ ಸರ್ಕಾರ
ರಾಷ್ಟ್ರೀಯ ಸೇವಾ ಯೋಜನೆ
ಪದವಿ ಪೂರ್ವ ಶಿಕ್ಷಣ ಇಲಾಖೆ

ಸಂಖ್ಯೆ: ಪ.ಪೂ.ಶಿ/ರಾಸೇಯೋ/ತಪಾಸಣೆ/93/2015-16

ನಿರ್ದೇಶಕರ ಕಛೇರಿ
ಪದವಿ ಪೂರ್ವ ಶಿಕ್ಷಣ ಇಲಾಖೆ
18ನೇ ಅಡ್ಡರಸ್ತೆ, ಮಲ್ಲೇಶ್ವರಂ
ಬೆಂಗಳೂರು -12
ದಿನಾಂಕ : 14.01.2016

## ಜ್ಞಾಪನ

ವಿಷಯ: 2015-16 ನೇ ಸಾಲಿನ ಪದವಿ ಪೂರ್ವ ಶಿಕ್ಷಣ ಇಲಾಖೆಯ ರಾಷ್ಟ್ರೀಯ ಸೇವಾ ಯೋಜನೆಯ ದೈನಂದಿನ ಕಾರ್ಯಕ್ರಮಗಳ ಲೆಕ್ಕಪತ್ರ ತಪಾಸಣಾ ಕಾರ್ಯಾಗಾರಗಳನ್ನು ಏರ್ಪಡಿಸುವ ಬಗ್ಗೆ. ಹಾಗೂ ರಾಷ್ಟ್ರೀಯ ಹಸಿರುಪಡೆ (Eco-Club) ಕಾರ್ಯಕ್ರಮಗಳ ವರದಿಗಳನ್ನು ಜಿಲ್ಲಾ ಉಪನಿರ್ದೇಶಕರರಿಂದ ಪಡೆಯುವ ಬಗ್ಗೆ.

| ಕ್ರ.ಸಂ | ದಿನಾಂಕ ಸಮಯ | ಲೆಕ್ಕತಪಾಸಣೆ ನಡೆಯುವ ಸ್ಥಳ | ಭಾಗವಹಿಸುವ ಜಿಲ್ಲೆಗಳು |
|---|---|---|---|
| 1 | 15/02/2016<br>ಬೆಳಿಗ್ಗೆ 9.00 ರಿಂದ<br>ಸಂಜೆ 5.00 ಗಂಟೆ ವರೆಗೆ | ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜು 13ನೇ ಅಡ್ಡರಸ್ತೆ, ಮಲ್ಲೇಶ್ವರಂ ಬೆಂಗಳೂರು - 560003 | ಚಿಕ್ಕಬಳ್ಳಾಪುರ,<br>ರಾಮನಗರ<br>ಮಂಡ್ಯ. |
| 2 | 17/02/2016<br>ಬೆಳಿಗ್ಗೆ 9.00 ರಿಂದ<br>ಸಂಜೆ 5.00 ಗಂಟೆ ವರೆಗೆ | ವಿಜಯ ನಗರ ಪದವಿ ಪೂರ್ವ ಕಾಲೇಜು ವಿದ್ಯಾನಗರ ಹುಬ್ಬಳ್ಳಿ, ಧಾರವಾಡ ಜಿ॥ 560031 | ಬೆಳಗಾಂ<br>ಬಿಜಾಪುರ<br>ಬಾಗಲಕೋಟೆ |
| 3 | 18/02/2016<br>ಬೆಳಿಗ್ಗೆ 9.00 ರಿಂದ<br>ಸಂಜೆ 5.00 ಗಂಟೆ ವರೆಗೆ | ವಿಜಯ ನಗರ ಪದವಿ ಪೂರ್ವ ಕಾಲೇಜು ವಿದ್ಯಾನಗರ ಹುಬ್ಬಳ್ಳಿ, ಧಾರವಾಡ ಜಿ॥ 560031 | ಗದಗ,<br>ಧಾರವಾಡ,<br>ಹಾವೇರಿ,<br>ಕಾರವಾರ |
| 4 | 22/02/2016<br>ಬೆಳಿಗ್ಗೆ 9.00 ರಿಂದ<br>ಸಂಜೆ 5.00 ಗಂಟೆ ವರೆಗೆ | ಸರ್ಕಾರಿ ಎಂಪ್ರೆಸ್ ಬಾಲಕಿಯರ ಪದವಿ ಪೂರ್ವ ಕಾಲೇಜು, ಅಶೋಕ ರಸ್ತೆ, ತುಮಕೂರು - 572101 | ತುಮಕೂರು,<br>ಚಿತ್ರದುರ್ಗ. |
| 5 | 24/02/2016<br>ಬೆಳಿಗ್ಗೆ 9.00 ರಿಂದ<br>ಸಂಜೆ 5.00 ಗಂಟೆ ವರೆಗೆ | ಆರಾಧನಾ ಸರ್ಕಾರಿ ಪದವಿ ಪೂರ್ವ ಕಾಲೇಜು ಶಹಬಜಾರ್, ಗುಲ್ಬರ್ಗಾ - 585104 | ಗುಲ್ಬರ್ಗಾ,<br>ಬೀದರ್,<br>ಯಾದಗಿರಿ |
| 6 | 25/02/2016<br>ಬೆಳಿಗ್ಗೆ 9.00 ರಿಂದ<br>ಸಂಜೆ 5.00 ಗಂಟೆ ವರೆಗೆ | ಆರಾಧನಾ ಸರ್ಕಾರಿ ಪದವಿ ಪೂರ್ವ ಕಾಲೇಜು ಶಹಬಜಾರ್, ಗುಲ್ಬರ್ಗಾ - 585104 | ಬಳ್ಳಾರಿ,<br>ರಾಯಚೂರು,<br>ಕೊಪ್ಪಳ |
| 7 | 27/02/2016<br>ಬೆಳಿಗ್ಗೆ 9.00 ರಿಂದ<br>ಸಂಜೆ 5.00 ಗಂಟೆ ವರೆಗೆ | ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜು 13ನೇ ಅಡ್ಡರಸ್ತೆ, ಮಲ್ಲೇಶ್ವರಂ ಬೆಂಗಳೂರು - 560003 | ಬೆಂಗಳೂರು ಉತ್ತರ<br>ಬೆಂಗಳೂರು ದಕ್ಷಿಣ<br>ಬೆಂಗಳೂರು ಗ್ರಾಮಾಂತರ<br>ಕೋಲಾರ |
| 8 | 01/03/2016<br>ಬೆಳಿಗ್ಗೆ 9.00 ರಿಂದ<br>ಸಂಜೆ 5.00 ಗಂಟೆ ವರೆಗೆ | ನಟರಾಜ ಬಾಲಕಿಯರ ಪದವಿ ಪೂರ್ವ ಕಾಲೇಜು ನಂ. 40 ಶಂಕರಮಠ ರಸ್ತೆ, ಮೈಸೂರು - 570004 | ಮೈಸೂರು, ಚಾಮರಾಜನಗರ,<br>ಕೊಡಗು |
| 9 | 02/03/2016<br>ಬೆಳಿಗ್ಗೆ 9.00 ರಿಂದ<br>ಸಂಜೆ 5.00 ಗಂಟೆ ವರೆಗೆ | ಎಸ್.ಡಿ.ಎಂ. ಪದವಿ ಪೂರ್ವ ಕಾಲೇಜು, ಉಜಿರೆ, ಬೆಳ್ತಂಗಡಿ ತಾ॥, ದ.ಕ - 574240 | ಉಡುಪಿ<br>ಮಂಗಳೂರು<br>ಹಾಸನ |
| 10 | 04/03/2016<br>ಬೆಳಿಗ್ಗೆ 9.00 ರಿಂದ<br>ಸಂಜೆ 5.00 ಗಂಟೆ ವರೆಗೆ | ಕೆ.ಎಲ್.ಕೆ. ಪದವಿ ಪೂರ್ವ ಕಾಲೇಜು ಬೀರೂರು, ಚಿಕ್ಕಮಗಳೂರು - 577116 | ಶಿವಮೊಗ್ಗ<br>ದಾವಣಗೆರೆ<br>ಚಿಕ್ಕಮಗಳೂರು |

ಮೇಲ್ಕಂಡ ಪ್ರದೇಶಗಳಲ್ಲಿ ನಡೆಯುವ ವರದಿ/ಲೆಕ್ಕಪತ್ರಗಳ ತಪಾಸಣಾ ಕಾರ್ಯಾಗಾರಕ್ಕೆ ನಿಮ್ಮ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನಾ ಕಾರ್ಯಕ್ರಮಾಧಿಕಾರಿಗಳನ್ನು ವರದಿ ಹಾಗೂ ಲೆಕ್ಕಪತ್ರಗಳನ್ನು ಸಲ್ಲಿಸಲು ಸೂಚಿಸಿ ಬಿಡುಗಡೆ ಮಾಡಲು ಮತ್ತು ಈ ಕೆಳಕಂಡ ದಾಖಲೆಗಳನ್ನು ತಪಾಸಣೆಗೆ ಒದಗಿಸಲು ತಿಳಿಯಪಡಿಸಲಾಗಿದೆ.

ಮೇಲ್ಕಂಡ ಪ್ರದೇಶಗಳಲ್ಲಿ ನಡೆಯುವ ವರದಿ/ಲೆಕ್ಕಪತ್ರಗಳ ತಪಾಸಣಾ ಕಾರ್ಯಗಾರಕ್ಕೆ ನಿಮ್ಮ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನಾ ಕಾರ್ಯಕ್ರಮಾಧಿಕಾರಿಗಳನ್ನು ವರದಿ ಹಾಗೂ ಲೆಕ್ಕಪತ್ರಗಳನ್ನು ಸಲ್ಲಿಸಲು ಸೂಚಿಸಿ ಬಿಡುಗಡೆ ಮಾಡಲು ಮತ್ತು ಈ ಕೆಳಕಂಡ ದಾಖಲೆಗಳನ್ನು ತಪಾಸಣೆಗೆ ಒದಗಿಸಲು ತಿಳಿಯಪಡಿಸಲಾಗಿದೆ.

ಇಲಾಖೆ ಒದಗಿಸಿರುವ ಲೆಕ್ಕಪತ್ರಗಳ ನಮೂನೆಗಳ ಮಾದರಿ ಮುಸ್ತಕದಲ್ಲಿ ನೀಡಿರುವ ಸೂಚನೆಗಳಂತೆ ಲೆಕ್ಕಪತ್ರಗಳನ್ನು ಮಾದರಿ ಮುಸ್ತಕದಲ್ಲಿ ತಯಾರಿಸಿ ಸಲ್ಲಿಸುವುದು.

1. ವರದಿಯನ್ನು ನಮೂನೆ 1 ಮತ್ತು 2ರ 3 ಮತ್ತು 4ರ ಪ್ರಕಾರ ತಯಾರಿಸುವುದು.
2. ಲೆಕ್ಕಪತ್ರ ಮೂಲ ರಶೀದಿಗಳು ನಿಯಮಾರಿತ್ಯ ದೃಢೀಕರಣಗೊಂಡಿರಬೇಕು . ಪ್ರಾಂಶುಪಾಲರು ಮತ್ತು ಕಾರ್ಯಕ್ರಮಾಧಿಕಾರಿಗಳು ಸಹಿ ಮಾಡಿರಬೇಕು. ಲೆಕ್ಕದ ವಿವರಗಳನ್ನು ನಮೂನೆ 3 ಮತ್ತು 4ರ ಪ್ರಕಾರ ತಯರಿಸುವುದು.
3. ಕ್ಯಾಷ್‌ಬುಕ್ ಮತ್ತು ಪಾಸ್‌ಬುಕ್ ತಪ್ಪದೆ ತಪಾಸಣೆಗೆ ಒಗಿಸುವುದು.
4. 2015-16 ನೇ ಸಾಲಿನ ಎನ್.ಎಸ್.ಎಸ್ ವಿದ್ಯಾರ್ಥಿಗಳ ಹಾಜರಾತಿ ಮುಸ್ತಕವನ್ನು ತಪ್ಪದೆ ತಪಾಸಣೆಗಾಗಿ ಹಾಜರುಪಡಿಸುವುದು.
5. ಬೇಡಿಕೆ ಮುಸ್ತಕ (ಇಂಡೆಂಟ್) ಎನ್.ಎಸ್.ಎಸ್ ಕಾರ್ಯಕ್ರಮಾಧಿಕಾರಿಗಳಗೆ ಪ್ರತಿಬಾರಿ ಪ್ರಾಂಶುಪಾಲರು ಹಣ ಪಡೆದ ವಿವರಗಳನ್ನು ತಪಾಸಣೆಗೆ ಒದಗಿಸುವುದು.
6. ಸ್ಟಾಕ್‌ಮುಸ್ತಕ ಎನ್.ಎಸ್.ಎಸ್ ಹಣದಿಂದ ವಿವಿಧ ಸಾಮಾಗ್ರಿಗಳು ಖರೀದಿಸಿದ ಬಗ್ಗೆ ವಿವರ, ರಸೀದಿ ಸಂಖ್ಯೆ ಮತ್ತು ವಿಳಾಸ ಒಟ್ಟು ಹಣ ವಿಳಾಸ ಒಟ್ಟು ಹಣ ಹಾಗೂ ಮುಂತಾದ ವಿವರಗಳು
7. 2015-16ನೇ ಸಾಲಿನ ಮುಖ್ಯ ಕಾರ್ಯಕ್ರಮಗಳ ವರದಿಯನ್ನು ಛಾಯಾ ಚಿತ್ರಗಳ ಸಹಿತ ನೀಡುವುದು. ಸದರಿ ಸಾಲಿನಲ್ಲಿ ದೈನಂದಿನ ಚಟುವಟಿಕೆಗಳಗ ಬಿಡುಗಡೆಯಾಗಿರುವ ಹಣದಲ್ಲಿ ಖರ್ಚಾಗದೆ ಉಳಿತಾಯವಾಗಿದ್ದಲ್ಲಿ ಈ ಹಣದಲ್ಲಿ ನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಹೆಸರಿನಲ್ಲಿ ಹುಂಡಿ ಪಡೆದು ತರತಕ್ಕದ್ದು.
8. 2ನೇ ಕಂತಿನ ಹಣ ಮತ್ತು ಕಾರ್ಯಕ್ರಮಾಧಿಕಾರಿಗಳ ತಪಾಸಣೆ ಕಾರ್ಯಾಗಾರದಲ್ಲಿ ವರದಿ ಲೆಕ್ಕಪತ್ರಗಳನ್ನು ಪರಿಶೀಲಿಸಿದ ನಂತರ ಬಿಡುಗಡೆ ಮಾಡಲಾಗುವುದು ( 2ನೇ ಕಂತಿನ ಹಣವನ್ನು ಕಾಲೇಜಿನ ಸಂಚಿತ ನಿಧಿಯಿಂದ ಪ್ರಾಂಶುಪಾಲರಿಂದ ಪಡೆದು ಖರ್ಚುಗಳನ್ನು ಭರಿಸಬಹುದಾಗಿದೆ)
9. ಮೇಲ್ಕಂಡ ಎಲ್ಲಾ ಲೆಕ್ಕಪತ್ರಗಳನ್ನು ವರದಿ ನಮೂನೆಗಳನ್ನು ಮುಸ್ತಕ ಮಾದರಿಯಲ್ಲಿ ತಯಾರಿಸಿ ತಪಾಸಣಾ ಕಾರ್ಯಾಕ್ಕೆ ಒದಗಿಸಲು ಮತ್ತು ಯೋಜನಾಧಿಕಾರಿಗಳು ಸಕಾಲಕ್ಕೆ ಹಾಜರಾಗಲು ಅನುವಾಗುವಂತೆ ಬಿಡುಗಡೆ ಮಾಡಲು ಕಾಲೇಜಿನ ಪ್ರಾಂಶುಪಾಲರು ಸೂಚಿಸಲಾಗಿದೆ.

(ಟಿಪ್ಪಣಿ ನಿರ್ದೇಶಕರಿಂದ
ಅನುಮೋದಿಸಲ್ಪಟ್ಟಿದೆ)

ರಾಜ್ಯ ಸಂಯೋಜನಾಧಿಕಾರಿಗಳು
ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು

## ರಾಷ್ಟ್ರೀಯ ಸೇವಾ ಯೋಜನೆ

1. ಎನ್.ಎಸ್.ಎಸ್ ಲೆಕ್ಕಪತ್ರ ಹಾಗೂ ವರದಿಗಳು ಮುಸ್ತಕದ ಮಾದರಿಯಲ್ಲಿ ಇರದೆ ಹಾಗೂ ಅಪೂರ್ಣವಾಗಿದ್ದಲ್ಲಿ ಸಂಬಂಧಿಸಿದ ಲೆಕ್ಕಪತ್ರ ಮತ್ತು ವರದಿಯನ್ನು ಒಪ್ಪಿಸಿಕೊಳ್ಳುವುದಿಲ್ಲ
2. ಕಾರ್ಯಕ್ರಮಾಧಿಕಾರಿಗಳ ಪ್ರಯಾಣ ಭತ್ಯೆಯನ್ನು ನಮೂನೆ-6ರಲ್ಲಿ 2ನೇ ದರ್ಜೆಯ ರೈಲ್ವೇ ದರ/ಎಕ್ಸ್‌ಪ್ರೆಸ್ ಬಸ್‌ದರವನ್ನು ಭರ್ತಿ ಮಾಡಿ ನೀಡಿದಲ್ಲಿ ಲೆಕ್ಕಪತ್ರವನ್ನು ಪರಿಶೀಲಿಸಿದ ನಂತರ ಕಾರ್ಯಕ್ರಮಾಧಿಕಾರಿಗಳ ನಿರ್ವಹಣೆ ಭತ್ಯೆಯನ್ನು ಎರಡನೇ ಕಂತಿನ ಅನುದಾನದ ಜೊತೆಯಲ್ಲಿ ಬಿಡುಗಡೆ ಮಾಡಲಾಗುವುದು. (ಪ್ರಯಾಣ ಭತ್ಯೆ ಮಾತ್ರ)
3. 2016 ರ ಜನವರಿ, ಫೆಬ್ರವರಿ/ಮಾರ್ಚ್ ತಿಂಗಳಲ್ಲಿ ನಡೆಯುವ ತಪಾಸಣಾ ಕಾರ್ಯಾಗಾರದಲ್ಲಿ ವರದಿ ಮತ್ತು ಲೆಕ್ಕಪತ್ರಗಳನ್ನು ಸಲ್ಲಿಸದಿದ್ದಲ್ಲಿ ಸಂಬಂಧಪಟ್ಟ ಘಟಕಗಳು ಕಾರ್ಯಕ್ರಮವನ್ನು ನಡೆಸಿಲ್ಲವೆಂದು ನಿರ್ಧರಿಸಿ ಈಗಾಗಲೇ ಬಿಡುಗಡೆ ಮಾಡಿರುವ ಹಣವನ್ನು ಹಿಂತಿರುಗಿಸಲು ಕಾರ್ಯಕ್ರಮಾಧಿಕಾರಿ ಮತ್ತು ಪ್ರಾಂಶುಪಾಲರ ಮೇಲೆ ಕ್ರಮ ಜರುಗಿಸಲಾಗುವುದು.
4. 100 ವಿದ್ಯಾರ್ಥಿಗಳ ಘಟಕ ಕಡ್ಡಾಯವಾಗಿ ಒಟ್ಟು 12,000 ಗಂಟೆಗಳ ಕಾರ್ಯಚಟುವಟಿಕೆಗಳನ್ನು ನಿರ್ವಹಿಸಿರಬೇಕು (ನಮೂನೆ-2ರಂತೆ ತಯಾರಿಸುವುದು. )
5. ಲೆಕ್ಕಪತ್ರ ಮತ್ತು ವರದಿಯನ್ನು ಮೇಲೆ ತಿಳಿಸಿರುವ ದಿನಾಂಕ ಮತ್ತು ಸ್ಥಳಗಳಲ್ಲಿ ಸಲ್ಲಿಸದಿದ್ದಲ್ಲಿ ಇಲಾಖೆಯ ಲೆಕ್ಕಧಿಕಾರಿಗಳಿಂದ ಲೆಕ್ಕತಪಾಸಣೆ ಮಾಡಿಸಿ ಸಲ್ಲಿಸುವ ಜವಾಬ್ದಾರಿ ಕಾರ್ಯಕ್ರಮಾಧಿಕಾರಿಗಳದ್ದಾಗಿರುತ್ತದೆ. ಲೆಕ್ಕತಪಾಸಣೆ ಮಾಡಿಸದೆ ಅಂಚೆಯಲ್ಲಿ ಬಂದ ಯಾವುದೇ ದೈನಂದಿನ ಚಟುವಟಿಕೆಗಳ ವರದಿಯನ್ನು ಸ್ವೀಕರಿಸುವುದಿಲ್ಲ. 12.03.2016 ರ ನಂತರ ಲೆಕ್ಕಪತ್ರಗಳನ್ನು ಸಲ್ಲಿಸಿದರೆ ಹಣ ಬಿಡುಗಡೆ ಮಾಡಲು ಅವಕಾಶವಿಲ್ಲ.